



ಬಂಗಾರದ ಒಡವೆಯಲ್ಲಿ ಅದೆಷ್ಟು ವೈವಿಧ್ಯಗಳಿದ್ದರೂ ಒಂದೇ ಹಾರಮ್ ಧರಿಸಿದರೆ ಮತ್ತೆಲ್ಲ ಆಭರಣಗಳನ್ನು ಬದಿಗೆ ಸರಿಸಬಲ್ಲದು. ಹೀಗೆ ರಾಣಿಯಂತೆ ಮೆರೆಯುವ ಹಾರಮ್‌ಗಳು ಇದೀಗ ಫ್ಯಾಷನ್ ಟ್ರೆಂಡ್ ಆಗಿದೆ. ಮಲ್ಲಿಗೆ ಮೊಗ್ಗಿನ ಹಾರಮ್, ಕೇರಳ ಹಾರಮ್, ಪಟ್ಟಿ ಹಾರಮ್, ಆ್ಯಂಟಿಕ್ ಹಾರಮ್ ... ಹೀಗೆ ಒಂದೇ ಎರಡೇ ಹಾರಮ್ ವೈವಿಧ್ಯಗಳಲ್ಲಿ...!

ಮದುವೆ ಮುಂಜಿಗಂತಹ ಶುಭ ಸಮಾರಂಭಗಳಲ್ಲಿ ಹತ್ತಾರು ಒಡವೆಗಳನ್ನು ಕೊರಳಲ್ಲಿ ಹೇರಿಕೊಂಡು ಪ್ರಯಾಸ ಪಡಬೇಕಿಲ್ಲ. ಒಂದೇ ಒಂದು ಲೈಟ್‌ವೈಟ್‌ನ ಹಾರಮ್ ತೊಟ್ಟುಕೊಂಡರೆ ಸಾಕು. ರೇಷ್ಮೆ ಸೀರೆ ಮೇಲೆ ಕಣ್ಮನ ಸೆಳೆಯುವ ಹಾರಮ್ ಸಖತ್ ಲುಕ್ ಕೊಡುತ್ತದೆ. ಇದೀಗ ಬಂಗಾರದ ಹಾರಮ್ ಕೈಗೆಟಕುವ ದರದಲ್ಲೂ ಲಭ್ಯ. ಇದನ್ನು ಒಂದು ಆಸ್ತಿ ಎಂದೂ ಖರೀದಿಸಿ ಇಡಬಹುದು. ಎಂದೆಂದಿಗೂ ಔಟ್‌ಡೇಟೆಡ್ ಆಗದ ಇಂಥ ಹಾರಮ್‌ಗಳು ಫ್ಯಾಷನ್ ಜೊತೆಗೆ 'ಎವರ್‌ಗ್ರೀನ್' ಆಗಿಯೂ ಮಿಂಚುತ್ತಿವೆ.

ಬಂಗಾರದ ಒಡವೆ ಎಂದಾಕ್ಷಣ ಹೆಂಗಳೆಯರು ಕಣ್ಣು ಅರಳುತ್ತದೆ. ಹೊಸತನ ವಿನ್ಯಾಸ, ಫ್ಯಾಷನ್, ಟ್ರೆಂಡ್, ಲುಕ್... ಹೀಗೆ ಯಾವ ದೃಷ್ಟಿಕೋನದಿಂದ ನೋಡಿದರೂ ಬಂಗಾರದ ಹಾರಮ್‌ಗಳು ಒಡವೆಗಳ ಲಿಸ್ಟ್‌ನಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತದೆ. ಎಷ್ಟೇ ಒಡವೆಗಳು, ಸರ, ನೆಕ್ಲೇಸ್‌ಗಳಿದ್ದರೂ ಪ್ಲೆಸೆಂಟ್ ಲುಕ್ ಕೊಡುವ ಸುಂದರವಾದ ಒಂದೇ ಒಂದು ಹಾರಮ್ ಇಲ್ಲದಿದ್ದರೆ ಹೇಗೆ? ತಿಜೋರಿಗೆ ಒಂದು ದೊಡ್ಡ ಹಾರಮ್ ಸೇರಿಕೊಂಡರೆ ಏನೋ ಸಂತೃಪ್ತ ಭಾವ.

ಸಾಮಾನ್ಯವಾಗಿ ಹಾರಮ್ ಅನ್ನು ಎಲ್ಲಾ ವಯಸ್ಸಿನ ಮಹಿಳೆಯರೂ ಹಾಕಲು ಇಷ್ಟಪಡುತ್ತಾರೆ. ಮದುವೆಯ ಶುಭ ಸಂದರ್ಭದಲ್ಲಿ ಮದುಮಗಳಿಗೆ ಎದೆ ಮಟ್ಟದಲ್ಲಿ ಒಂದು ಹಾರಮ್ ಇಲ್ಲದಿದ್ದರೆ ಬಂಗಾರ ಕಾಣುವುದೇ ಇಲ್ಲ. ಸಾಧಾರಣ 28, 30 ಇಂಚು ಉದ್ದದ್ದಾದರೆ ಕಣ್ಣಿನ ಮಟ್ಟಕ್ಕೆ ಸರಿಯಾಗಿರುತ್ತದೆ. ಇನ್ನು ಬೆರಳಷ್ಟು ಅಗಲ ಇದ್ದು ಅವರವರ ದೇಹಕ್ಕೆ ಹೊಂದಿಕೊಂಡು ಆರಿಸಿಕೊಳ್ಳಬೇಕು!

ಹಾರಮ್ ಬರೀ ಅಲಂಕಾರಕ್ಕಾಗಿ ಅಲ್ಲ. ವಂಶಪಾರಂಪರಿಕವಾಗಿ ಹರಿದು ಮುಂದಿನ ಪೀಳಿಗೆಗೆ ನೀಡಲು ಉಪಯೋಗಕ್ಕೆ ಬರುತ್ತದೆ. 24 ಗ್ರಾಂನಿಂದ ಪ್ರಾರಂಭವಾದದ್ದು ವಿನ್ಯಾಸ, ಗಟ್ಟಿಯ ಆಧಾರದ ಮೇಲೆ ಗ್ರಾಂನಲ್ಲಿ ವ್ಯತ್ಯಾಸ ಮಾಡಿಕೊಂಡರಾಯಿತು. ಇನ್ನೂ ಲೈಟ್ ವೈಟ್ ಬೇಕಾದಲ್ಲಿ ಮಾಡಿಕೊಳ್ಳಬಹುದು. ಆದರೆ ಬಹಳ ಜಾಗರೂಕತೆಯಿಂದ ಬಳಸಬೇಕು.

ಹಾರಮ್‌ಗಳಲ್ಲೂ ಹಲವಾರು ವಿಧಗಳಿವೆ. ಸೀರೆಗೆ ಹೊಂದುವಂತಹದ್ದು, ದಿರಿಸುಗಳಿಗೆ ಹೊಂದುವಂತಹದ್ದು, ವಿವಿಧ ವಿನ್ಯಾಸಗಳಲ್ಲಿ ಬರುತ್ತದೆ. ಹಿರಿಯ, ಕಿರಿಯ ವಯಸ್ಸಿನ ಹೆಂಗಳೆಯರು ಇದನ್ನು ಧರಿಸಿ ಸಂತಸ ಪಡಬಹುದು.

## ಪಟ್ಟಿ ಹಾರಮ್

ಇದು ಚಪ್ಪಟೆಯಾಗಿದ್ದು ಸಾಂಪ್ರದಾಯಿಕವಾದ ಕಾರ್ಯಕ್ರಮ, ಪೂಜೆ, ಹೋಮಗಳಿಗೆ ಸಾಮಾನ್ಯವಾಗಿ ಧರಿಸುವಂತಹ ಆಭರಣ. ಪುರಾತನ ಕಾಲದಿಂದಲೂ ಬಳಕೆಯಲ್ಲಿದೆ. ವರುಷ ಕಳೆದರೂ ಹಳತಾಗದ 'ಎವರ್ ಗ್ರೀನ್ ಹಾರಮ್' ಇದು. ಇದು ಸಾಧಾರಣವಾಗಿ ಹಳದಿ ಚಿನ್ನದಲ್ಲೇ ಚಂದ. ಈ ಹಾರಮ್‌ನಲ್ಲಿ ಪೆಂಡೆಂಟ್ ಸ್ವಲ್ಪ ದೊಡ್ಡದಾಗಿರಬೇಕು. ಆಗ ಅಗಲವಾಗಿ ಸೊಗಸಾಗಿರುತ್ತದೆ.

## ಕೇರಳ ಹಾರಮ್

ಇವು ಬಹಳ ಲೈಟ್ ಹಾರಮ್‌ಗಳು. ನೋಡಲು ಬಲು ದೊಡ್ಡದಾಗಿದ್ದು ಬಹಳ ಹಗುರವಾಗಿರುತ್ತದೆ. ಹಿಂಬದಿ ಸ್ವಲ್ಪ ಟೊಳ್ಳಾಗಿರುತ್ತದೆ. ಆದರೆ ವಿನ್ಯಾಸ ಬಹಳ ಅದ್ಭುತವಾಗಿರುತ್ತದೆ. ಚಿನ್ನವೇ ಕಾಣಬೇಕು. ಸೀರೆಯ ಮೇಲೆ ಎದ್ದು ಕಾಣಬೇಕು ಎಂದು ಬಯಸುವವರು ಇದನ್ನು ಧರಿಸಬೇಕು. ಇದು ಫ್ಲೆಕ್ಸಿಬಲ್ ಆಗಿ ಇರುತ್ತದೆ. ಯಾವುದಾದರೂ ಒಂದು ಡೈಪೀಸ್ ತುದಿಯಿಂದ ತುದಿಯವರೆಗೆ ಹತ್ತಿರ ಹತ್ತಿರವಾಗಿದ್ದು ಬಹಳ ಆಕರ್ಷಕವಾಗಿರುತ್ತದೆ. ತುಂಬಾ ಡಿಸೈನ್ ಇಲ್ಲದ ಅಂಚು ಹೊಂದಿದ ಸೀರೆಗಳಿಗೆ ಸೊಗಸು.

## ಆ್ಯಂಟಿಕ್ ಹಾರಮ್

ಸಾಧರಣ ಆ್ಯಂಟಿಕ್ ಹಾರಮ್‌ಗಳು ಕೆಂಪು ಮಿಶ್ರಿತ ಹಳದಿ ಬಣ್ಣದಲ್ಲಿದ್ದು, ರೂಬಿ, ಎಮರಾಲ್ಡ್, ಬೀಡ್ಸ್‌ಗಳನ್ನು ಒಳಗೊಂಡಿರುತ್ತದೆ. ದೇವತಾ ವಿನ್ಯಾಸದ ಒಂದು ಪೆಂಡೆಂಟ್ ಇದ್ದು ದಪ್ಪಗಿನ ಹಾರವಾಗಿರುತ್ತದೆ. ಈಗೀಗ ಟ್ರೆಂಡೀ ವಿನ್ಯಾಸಗಳಾಗಿ ತುಳಸಿಕಟ್ಟೆ, ಮಂಟಪ, ನವಿಲು ಹೀಗೆ ಬೇರೆ ಬೇರೆ ಪೆಂಡೆಂಟ್‌ಗಳು ಬಂದಿವೆ. ಸರದ ಭುಜದ ಭಾಗದಲ್ಲಿ 'ಮೋಪ್' ಅಳವಡಿಸಿದ್ದು 3 ಎಳೆಯ ಗುಂಡಗಿನ ಸರ ಅಳವಡಿಸಲಾಗುತ್ತದೆ. ಸೊಂಟಕ್ಕೂ, ತಲೆಗೂ ಇದನ್ನು ಧರಿಸಬಹುದು, ಕೇಶವಿನ್ಯಾಸದ ಮೇಲೂ ಬಳಸಬಹುದು. ಅಗಲ ಅಂಚುಗಳ ಸೀರೆಗಳಿಗೆ ಸೂಕ್ತ.

## ಬಾಂಬೆ ಹಾರಮ್

ಈಗಿನ ಪ್ರಚಲಿತ ಹಾರಮ್‌ಗಳನ್ನು ಬಾಂಬೆ ಹಾರಮ್ ಎನ್ನುತ್ತಾರೆ. ಇದರ ವಿನ್ಯಾಸವನ್ನು ವಿವರಿಸಲು ಪದಗಳೇ ಸಾಲದು. ಹರಳುಗಳು, ಮುತ್ತು ಯಾವುದೇ ನವರತ್ನವನ್ನು ಬಳಸಬಹುದು. ಅಲ್ಲದೆ ಕುಸುರಿ ಕೆಲಸವನ್ನು ಹೊಂದಿದ್ದು, ಮಧ್ಯೆ ಮಧ್ಯೆ ವೈಟ್ ಗೋಲ್ಡ್ ಫಿನಿಶ್ ಇರುವುದು ಬಹಳ ಬೇಡಿಕೆಯಲ್ಲಿದೆ. ಈ ಹಾರಮ್‌ಗಳು ಎಲ್ಲಾ ವಯಸ್ಸಿನವರೂ ಧರಿಸಬಹುದು. ಇದು ಫ್ಯಾನ್ಸಿ ಸಾರಿ ಕಂಚಿ ಸೀರೆಗಳಿಗೆ ಅಂದವಾಗಿರುತ್ತದೆ.

## ಮಲ್ಲಿಗೆ ಮೊಗ್ಗು ಹಾರಮ್

ಇದು ಪುರಾತನ ಕಾಲದಿಂದಲೂ ಬಳಕೆಯಲ್ಲಿದ್ದ ಹಾರಮ್. ನೋಡಲು ಮಲ್ಲಿಗೆಯ ಮೊಗ್ಗುಗಳನ್ನು ಹಣೆದು ಪೋಣಿಸಿದಂತಿದ್ದು. ಈ ಹಾರಮ್ ಕಾಟನ್ ಸೀರೆ, ಜರಿ ಸೀರೆಗಳಿಗೆ ಬಲು ಚಂದ. ನಾವು ಚಿನ್ನ ಖರೀದಿಸುವಾಗ ಯಾಕೆ ಇದು ಇಷ್ಟು ದೊಡ್ಡದಾಗಿರುವುದು ಬೇಕಾ ಎಂದು ಎನಿಸಬಹುದು. ಆದರೆ ಚಿನ್ನದ ಬೆಲೆ ಎಂದೂ ಕುಗ್ಗದೆ ಹಿಗ್ಗುತ್ತಾ ಹೋಗುತ್ತಿದೆ. ಆರೋಗ್ಯ ದೃಷ್ಟಿಯಿಂದಲೂ ಇತರ ಕೃತಕ ಆಭರಣಗಳ ಬಳಕೆಗಿಂತ ಚಿನ್ನ, ಬೆಳ್ಳಿಯ ಆಭರಣ ದೇಹಾರೋಗ್ಯವನ್ನು ವೃದ್ಧಿಸುತ್ತದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65